Reg No M 1229 42nd Year Sri "Satyavadi" Mysore 7—1—1958

ಸತ್ಯವಾದಿ

ಬಿಡಿ ಪ್ರತಿ 3 ಪೈ] ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ರಾಯುರು

ಮದ್ರಾಸಿಗೆ ಪಂ. ನೆಹರು ಆಗಮನ – ಡಿ. ಎಂ. ಕೆ. ಯವರ ಗಲಭೆ

ಮದ್ರಾಸು 6 — ದಪಿಡ ಮುನ್ನೇತ್ರ ಕಜಗಂನ 20 ಸಹಸ್ರ ಪ ದರ್ಶಕರುಗಳು ಈ ಸಂಜೆ ನಗರದ ಪ್ರಧಾನ ಕೇಂದ್ರ ವ ೆಂಟು ರೋಡಿನಲ್ಲಿ ಎಂಡು ಗಂಟೆಗಳ ವರಿಗೆ ಪೋಲೀಸಂ ಮೇಲೆ, ಸಂಚಾರ ವಾಹನಗಳ ಮೇಲೆ ಮತ್ತು ಅಂಗಡಿ ಕಿಟಕಿಗಳ ಮೇಲೆ ಕಲ್ಲು ಇಟ್ಟಿಗೆ ಚೂ ು ಮುಂತಾದುವನ್ನು ಎಸೆದರು 6 ಬಸ್ಸುಗಳನ್ನು ಸುಟ್ಟರು ಪೋಲೀಸರು 4 ಕಡೆ ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗಿಸಿದರು ಈ ಪ್ರದೇಶ 2 ಗಂಟೆ ಭೀತಿ ಆಡಳಿತದಲ್ಲಿತ್ತು

ನವ ದೆಹಲಿಯಿಂದ ಈ ಸಂಜೆ ಆಗಮಿಸಿದ ಪಂ|| ನೆಹರು ವಿರುದ್ಧ 2 ಸಹಸ್ರ ದ್ರವಿಡ ಮುನ್ನೇತ್ರ ಕಜಗಂ ಸ್ವಯಂ ಸೇವಕರು ಕರಿಬಾವುಟ ಪ್ರದರ್ಶಿಸಿದರು

ಮದ್ರಾಸು 6 — ಭಾರತ ವಿಜ್ಞಾನ ಕಾಂಗ್ರೆಸಿನ 45 ನೇ ಅಧಿವೇಶನವನ್ನು ಪಂ|| ನೆಹರು ಈ ಸಂಜೆ ಉದ್ಘಾಟಿಸಿದರು

ರಷ್ಯ ಪ್ರವಾಸದ ಅನುಭವ

ಬೆಂಗಳೂರು 5— ನೇ ತ್ರ ದಾ ನಿ ಪದ್ಮಶ್ರೀ ಡಾ|| ಮೋದಿಯವರು ತಮ್ಮ ರಷ್ಯಾ ಪ್ರವಾಸದ ಅನುಭವವನ್ನು ಪತ್ರಿಕೆಯವರಿಗೆ ತಿಳಿಸುತ್ತಾ—ರಷ್ಯನರಿಗೆ ಭಾರತದ ಕಲಾ ಮತ್ತು ಸಂಸ್ಕೃತಿಯ ಬಗ್ಗೆ ಅಭಿಮಾನ ಇದೆ : ರಷ್ಯಾ ಸ್ತ್ರೀಯರು ಫ್ಯಾಷನ್ನಿನ ಕಡೆಗೆ ಸ್ವಲ್ಪವೂ ಮನಸೋತಿಲ್ಲ ; ರಷ್ಯಾದಲ್ಲಿ ನಿಂಕ್ಷುರತೆಗೂ ಭಿಕ್ಷಾಟನೆಗೂ ಸ್ಥಾನವಿಲ್ಲ : ಅಲ್ಲಿ ದಿನಪತ್ರಿಕೆಗಳು 4 ಪುಟಗಳುಳ್ಳವಾಗಿವೆ ; ರಷ್ಯಾದಲ್ಲಿ ಪದಾರ್ಥಗಳಾಗಲೀ ಮಾನವಶಕ್ತಿಯಾಗಲೀ ವ್ಯರ್ಥವಾಗಲು ಅವಕಾಶ ಕೊಡಲ್ಪಡುವುದಿಲ್ಲ, ಎಂದು ಹೇಳಿದರು

× ಡಾಕಾ 6— ಒಂದು ಜೀಪು ಒಂದು ಸೈಕಲ್ ರಿಕ್ಷಾಕ್ಕೆ ಬಡಿದು ಇಬ್ಬರು ಸತ್ತು 8 ಮಂದಿ ಗಾಯಗೊಂಡರು

ಸಾಮೂಹಿಕ ವಿವಾಹ ನಡೆಸುವ ತೀರ್ಮಾನ

ಮದುವೆಯ ಖರ್ಚುಗಳು ಮತ್ತು ಅಡಂಬರವನ್ನು ತಗ್ಗಿಸಲು ಜಬ್ಬಲ್ಪುರದಲ್ಲಿ ಫೆಬ್ರವರಿ 3 ನೇ ವಾರದಲ್ಲಿ ನಡೆಯುವ ಭಾರಿ ಮತೀಯ ಮತ್ತು ಸಂಸ್ಕೃತಿಯ ಸಮಾರಂಭ ಕಾಲದಲ್ಲಿ ಸಾವಿರ ಜೋಡಿ ಸಾಮೂಹಿಕ ವಿವಾಹಗಳನ್ನು ನಡೆಸಲು ಜೈನ ಸಮಾಜವು ನಿರ್ಧರಿಸಿದೆ,

ಪೌರ ಸಂಯುಕ್ತ ಪಕ್ಷ ರಚನೆ

ಮೈಸೂರು 7 — ನಿನ್ನೆ ಸಂಜೆ ನಡೆದ ಕಾಂಗ್ರೆಸ್ಸೇತರ ಪೌರಸಭಾ ಸದಸ್ಯರುಗಳ ಸಭೆಯಲ್ಲಿ 'ಮೈಸೂರು ನಗರ ಪೌರ ಸಂಯುಕ್ತಪಕ್ಷ ಸ್ಥಾಪಿಸಬೇಕೆಂಬ ತೀರ್ಮಾನ ಕೈಗೊಳ್ಳಲಾಯಿತು ಶ್ರೀ ಬಿ ಕೆ. ರಾಮಕೃಷ್ಣಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು. ಅಧಿಕಾರ ವರ್ಗಕ್ಕೆ ಈ ಕೆಳಗೆ ಕಂಡವರು ಸರ್ವಾನುಮತದಿಂದ ಚುನಾಯಿತರಾದರು —

ಶ್ರೀ ವಿ ಸೂರ್‌ನೂರ್‌ಹುಸೇನ್ (ನಾಯಕರು) ಡಾ|| ಬಿ. ಜಿ ದಾಸ್ ಮತ್ತು ಶ್ರೀ ಎಸ್ ಶ್ರೀಕಂಠಶರ್ಮ (ಉಪನಾಯಕರು) ಶ್ರೀ ಎಜೇಜ್ ಸೇಟ್ ಮತ್ತು ಶ್ರೀ ಚಿಕ್ಕತಮ್ಮಯ್ಯ (ಸಚೇತಕರು) ಶ್ರೀ ಎಂ ಎಕ್ ತಿಮ್ಮಯ್ಯ (ಕಾರ್ಯದರ್ಶಿ) ಶ್ರೀ ಸೋಮಸುಂದರ ಶರ್ಮ (ಖಜಾಂಚಿ)

ಗ್ರಾಮದಾನ

ಅಲಹಾಬಾದು ಜಿಲ್ಲೆಯ ಮೇಜಾ ತೇಸಿಲ್ದಿನ ಬರ್ಹಪುರ ಗ್ರಾಮವು ಗ್ರಾಮದಾನವಾಗಿ ಕೊಡಲ್ಪಟ್ಟಿದೆ ; ಅಲಹಾಬಾದು ಜಿಲ್ಲೆಯಲ್ಲಿ ಪ್ರಥಮ ಗ್ರಾಮದಾನವಿದು : ಇದು 1203 ಎಕ್ರೆಗಳದ್ದು, 247 ಜನಸಂಖ್ಯೆಯನ್ನೊಳಗೊಂಡಿದೆ.

ಸುದ್ದಿಗಳು

ನವದೆಹಲಿ 6— ಇಚ್ಛೆಪಡದ ಜನರ ಮೇಲೆ ಯಾವ ಭಾಷೆಯನ್ನೂ ಒತ್ತಾಯದಿಂದಾಗಲೀ ಮೋಸದಿಂದಾಗಲೀ ಹೇರಕೂಡದೆಂದು ಇಲ್ಲಿ ನಿನ್ನೆ ನಡೆದ ಸರ್ವದೇಶಿಕ ಭಾಷಾ ಶಬ್ದಕೋಶ ಸಮಿತಿ ಮತ್ತು ಹಿಂದಿ ರಕ್ಷಣ ಸಮಿತಿಯ ಜಂಟೀ ಸಭೆಯಲ್ಲಿ ನಿರ್ಣಯಿಸಲಾಯಿತು

ತುಮ್ಕೂರಿನಲ್ಲಿ 10 ಸಾವಿರ ರೂ ಪಾಯಿಗಳ ಖರ್ಚಿನಿಂದ ಸ್ಥಾಪಿಸಲ್ಪಟ್ಟ ಸುಂದರವಾದ 7 ಅಡಿಯ ಗಾಂಧೀಜೀ ಪ್ರತಿಮೆಯನ್ನು ಮದರಾಸಿನ ಗೃಹ ಸಚಿವ ಶ್ರೀ ಭಕ್ತವತ್ಸಲಂ ಶನಿವಾರ ಅನಾವರಣ ಮಾಡಿದರು.

ವಾಷಿಂಗ್ಟನ್ನಿನ ಬಟ್ಟೆ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನ ನಡೆಯುತ್ತಿರುವುದರ ಪೈಕಿ ಬೌದ್ಧ ಜೀವಿತ ವಿವರಿಸುವ ಕಸೂತಿ ಕೆಲಸದ ಚಿತ್ರಗಳು ಇವೆ

ಫ್ರಾನ್ಸಿನಲ್ಲಿ ಆಂಗ್ಲ ಭಾಷೆ ಬಹು ಜನಪ್ರಿಯವಾಗಿದೆ ಎಂದು ಪ್ರಕಟವಾಗಿದೆ

ಫ್ರಾನ್ಸಿನಲ್ಲಿ ಆ ದೇಶಕ್ಕೆ ಬೇಕಾದ ಅಕ್ಕಿಯು ಬೆಳೆ ಆಗುತ್ತಿದೆ.

ಸಿಂಗಪುರದಲ್ಲಿ ಸಿಗರೇಟು ಆಕ್ರಮ ಸಾಗಾಣಿಕೆ ಭಾರಿ ವ್ಯಾಪಾರ ಆಗಿದೆ.

ಪಾರ್ಶ್ವ ವಾಯು ಸಂಬಂಧದ ಖಾಯಿಲೆಗಳಿಗೆ ತಯಾರಿಸುವ ಔಷಧಿಗೆ ಕೋತಿಗಳ ಅವಶ್ಯಕತೆ ಇಲ್ಲವೆಂದು ವೆಲ್ಲೂರಿನ್ನಿನ ವಾಲ್ಟರ್ ಮತ್ತು ಎಲೈನಾ ಪರಿಶೋಧನಾಲಯದ ಡೈರೆಕ್ಟರ್ ತಿಳಿಸಿದ್ದಾರೆ ಕೋತಿಗಳು ಬದುಕಿಕೊಂಡವು.

ಮೊಗಲ್ ಚಕ್ರವರ್ತಿ ಔರಂಗ್‌ಜೇಬನು ಜಯಪುರದ ಅಂಬಾಳ ಮಹಾರಾಜ ರಾಮಸಿಂಗಿಗೆ ಒರೆದಿದ್ದ ಕಾಗದದಲ್ಲಿ ಏನಾದರೂ ಗೋಹತಿಯನ್ನು ಆಕ್ರಮಿಸಬೇಕೆಂದು ತಿಳಿಸಿದ್ದನು ಈ ಕಾಗದ ಜೈಪುರ ಸರ್ಕಾರದ ವಶದಲ್ಲಿದೆ.

ಶಾಸನೋಲ್ಲಂಘನೆ ಕಾರ್ಯಕ್ರಮಕ್ಕೆ ಸಭೆ

ಬೆಂಗಳೂರು 6 — ಸೋಷಲಿಸ್ಟ್ ಪಾರ್ಟಿಯು ಕರ್ನಾಟಕ ಶಾಖೆಯು ತಾ|| 26 ರಿಪಬ್ಲಿಕ್ ದಿನದಿಂದ ಹೂಡಬೇಕೆಂದಿರುವ ಶಾಸನೋಲ್ಲಂಘನ ಚಳವಳಿ ಸಂಬಂಧದಲ್ಲಿನ ವಿಚಾರಗಳನ್ನು ಅಂತಿಮಗೊಳಿಸಲು ಮುಂದಿನ ಶನಿವಾರ ಭಾನುವಾರ ವಿಶೇಷ ಸಭೆಯೊಂದನ್ನು ನಡೆಸಲಿರುವರು.

——

ಟೋಕಿಯೋ 6— ಪಶ್ಚಿಮ ರಾಷ್ಟ್ರಗಳಿಗೂ ರಷ್ಯಾಕ್ಕೂ ಆಕ್ರಮಣನಿರೋಧಿ ಒಪ್ಪಂದವಾಗಬೇಕೆಂಬ ಬ್ರಿಟಿಷ್ ಪ್ರಧಾನಿ ವೆಕ್ಲಿಲನ್ನರು ಮಾಡಿರುವ ಸೂಚನೆಯನ್ನು ಜಪಾನಿನ ವಿದೇಶಾಂಗ ಸಚಿವಾಲಯದ ಅಧಿಕಾರಿಗಳು ಸ್ವಾಗತಿಸಿರುವರು

ಮೈಸೂರು 7 — ನವೆಂಬರಿನಲ್ಲಿ ನಡೆದ ಎಂ ಬಿ ಬಿ ಎಸ್ ಮತ್ತು ಡಿ ಎಂ ಪಿ ಪರೀಕ್ಷೆಗಳ ಫಲಿತಾಂಶಗಳು ಇಂದು ಪ್ರಕಟಿಸಲಾಯಿತು — ನಮ್ಮ ಆಫೀಸು ನಲ್ಲಿಯೂ ಪ್ರದರ್ಶಿಸಲಾಗಿತ್ತು

ಬೆಂಗಳೂರು 6 — ಆಯುರ್ವೇದ ಮತ್ತು ಹೋಮೋಪತಿಯಲ್ಲಿ ಸಂಶೋಧನೆಗೆ ಕೇಂದ್ರ ಸಹಾಯ ಕೊಡಬೇಕೆಂದು ಹೆಲ್ತ್ ಕೌನ್ಸಿಲ್ ನಿರ್ಣಯಿಸಿತು.

ಬೆಂಗಳೂರು 6— ಮಹಿಳೆಯರು ಒಳ್ಳೇ ಲಾಯರುಗಳಾಗಬಲ್ಲರು— ಎಂದು ಕೊಲಂಬಿಯಾದ ಒಂದು ಮುನಿಸಿಪಲ್ ಕೋರ್ಟಿನ ಪ್ರಮುಖ ಹೊಂದಿದ ಜಡ್ಜಿ ಮಿಸೆಸ್ ಗುಲಾಗರ್, ರೊಟೇರಿ ಕ್ಲಬ್ಬಿನಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು

ಸಿಡ್ನಿ 6— ಇಲ್ಲಿಗೆ 7 ಮೈಲಿ ದೂರದಲ್ಲಿ ಮಣ್ಣುತೆಗೆಯುವ ಯಂತ್ರಕ್ಕೆ ನ್ಯೂ ಕ್ಯಾಸಲ್ಲಿನಿಂದ ಬರುತ್ತಿದ್ದ ಮೇಲ್ ಟ್ರೇನು ಬಡಿದು 60 ಮಂದಿ ಗಾಯಗೊಂಡರು.

ಐನೂರು ಬಸ್ಸುಗಳು ಅನುಪಯೋಗ

ಸಿಲೋನು ಸರಕಾರವು ದ್ವೀಪದ 3000 ಛತ್ರಗಳ ಸಂಚಾರದ ಅಡಚಣೆಯನ್ನು ರಾಷ್ಟ್ರೀಕರಣ ಮಾಡಿದ 3 ದಿವಸಗಳಲ್ಲಿ 500 ಬಸ್ಸುಗಳು ಅನುಪಯೋಗವೆಂದು ತೆಗೆದುಹಾಕಲ್ಪಟ್ಟವು.

ಕೈಗಳು ಇಲ್ಲದವನಿಗೆ ಮೋಟಾರ್ ಲೈಸನ್ಸ್

ಸ್ವೀಡನ್ನಿನ ಸ್ಕೆಲೆಫ್ಟೇಯಲ್ಲಿ ಕೈಗಳಿಲ್ಲದ 38 ವರ್ಷದ ಹಾನ್ಸ್ ಲಂಡ್‌ಕ್ವಿಸ್ಟನು ಮೋಟಾರು ನಡೆಸಲು ಲೈಸೆನ್ಸು ಪಡೆದಿದ್ದಾನೆ ; ತನ್ನ ಕಾಲುಗಳು, ಭುಜಗಳು ಮತ್ತು ಗಲ್ಲವನ್ನು ಉಪಯೋಗಿಸಿ ಮೋಟಾರು ನಡೆಸುತ್ತಾನೆ

ಮೂರು ವರ್ಷಗಳ ಹಿಂದೆ ನಾಪತ್ತೆ ಆಗಿದ್ದ ಪಾರಿವಾಳ

ಮೂರು ವರ್ಷಗಳ ಹಿಂದೆ ಜಪಾನಿನ ಟೋಕಿಯೋದಿಂದ ತಪ್ಪಿಸಿಕೊಂಡು ಹೋಗಿದ್ದ ಒಂದು ಪಾರಿವಾಳವು ಅಮೆರಿಕಾದ ನ್ಯೂಜರ್ಸಿಯ ಮೆಡಿನಿಸಿನ ವಾರ್ನರ್ ಡೊರೆಯೆಸ್ ಎಂಬಾತನ ಪಕ್ಷಿಗಳ ಗುಂಪಿನಲ್ಲಿ ಸಿಕ್ಕಿದೆ ; ಅದರ ಕಾಲುಗಳಿಗೆ ಕಟ್ಟಿದ್ದ ಜಪಾನೀ ಅಕ್ಷರದ ಚೀಟಿಯಿಂದ ಇದು ವ್ಯಕ್ತವಾಯಿತು — ಅಂದರೆ ಈ ಪಾರಿವಾಳವು 7000 ಮೈಲಿಗಳನ್ನು ಹಾರಿದೆ !

ದಿವ್ಯವಾಣಿ

ನಮ್ಮ ಪೂರ್ವಿಕರ ಸದ್ಗುಣಗಳನ್ನು ನಾವು ಅನುಸರಿಸದಿದ್ದರೆ ಅವು ನಮಗೆ ಏನು ಲಾಭ ಉಂಟು ಮಾಡಿಯಾವು ?

ವಿನೋದ

ಮನೆಯವನು — ಕೂಡಲೇ ಎಲ್ಲ ಪದಾರ್ಥಗಳನ್ನು ಇಟ್ಟುಹೊರಡು ಕೇಳಲಿಲ್ಲವೇ ?

ಕಳ್ಳ — ಸ್ವಾಮಿ ಎಲ್ಲವನ್ನೂ ಅಲ್ಲ ಇದರಲ್ಲಿ ಅರ್ಧ ಪಕ್ಕದ ಮನೆಗೆ ಸೇರಿದ್ದು

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞಶಿಖಾಮಣಿ ಸಂಪತ್ಕುಮಾರ ಜೋಯಿಸರಿಂದ

8 ತೃತೀಯ ಆಶ್ಲೇಷ

ಸಿಗರೇಟುಪ್ಯಾಕ್ ಎಸೆದವರ ಪತ್ತೆಗೆ ಭಾರಿ ಬಹುಮಾನ

ಸಿಕ್ಕರ ಐತಿಹಾಸಿಕ ಸ್ವರ್ಣ ದೇವಾಲಯದ ಪವಿತ್ರ ಸರೋವರಕ್ಕೆ ಮತ್ತು ಅಕಾಲಿ ನಾಯಕ ಮಾಸ್ಟರ್ ತಾರಾಸಿಂಗರ ಮನೆಯಲ್ಲಿ ಸಿಗರೇಟು ಪ್ಯಾಕುಗಳನ್ನು ಎಸೆದ ಸ್ಥಳ ಹಿಡಿದ ಕೊಡುವವರಿಗೆ ಒಂದು ಸಾವಿರ ಬಹುಮಾನ ಕೊಡುವುದಾಗಿ ಪಂಜಾಬು ಸರ್ಕಾರ ಪ್ರಕಟಿಸಿದೆಯೆಂದು ಅವೃತಸರ ವಾರ್ತೆ ಈ ಸಂಬಂಧದಲ್ಲಿ 5 ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಶಿರೋಮಣಿ ಗುರುದ್ವಾರ ಪರಬಂಧಕ ಸಮಿತಿಯವರು ಪ್ರಕಟಿಸಿದ್ದಾರೆ

ಭಂಗಾರದ ಭೋಜನೋಪಕರಣ

1910 ರಲ್ಲಿ ನ್ಯೂಜಿಲೆಂಡಿನ ಒಂದು ಗಣಿ ಕಂಪೆನಿಗೆ 100 ಔನ್ಸುಗಳ ಕೂಡದ ಚಿನ್ನದ ಗಟ್ಟಿ ದೊರೆತಿತ್ತು : ಮಾನೇ ವರ್ಷ 5 ನೇ ಜಾರ್ಜ್ ಚಕ್ರವರ್ತಿಯ ಕಿರೀಟಧಾರಣಾ ಮಹೋತ್ಸವವು ನಡೆದಾಗ ಕಿರೀಟಧಾರಣಾ ಬಹುಮಾನವಾಗಿ ಕಳಿಸಲಾಯಿತು ; ಈ ಭಂಗಾರದಿಂದ 1919 ರಲ್ಲಿ ಅರಮನೆಯಲ್ಲಿ ಉಪಯೋಗಿಸಲ್ಪಡುವ ಚಂಚ, ಫೋರ್ಕು ಮುಂತಾದ ಭೋಜನ ಕಾಲದಲ್ಲಿ ಉಪಯೋಗಿಸಲ್ಪಡುವವುಗಳನ್ನು ತಯಾರಿಸಲಾಯಿತು — ಅರಮನೆಗೆ ಸಂಬಂಧಿಸಿದ ಭಾರಿ ಔತಣ ಕಾಲದಲ್ಲಿ ಇವನ್ನು ಈಗಲೂ ಉಪಯೋಗಿಸಲಾಗುತ್ತಿವೆ.

SHAKTI SUDHA
A Superb Tonic

Protect the cow
ಗೋ ಸಂರಕ್ಷಣೆ ಮಾಡಿ

ವುಡ್‌ಲ್ಯಾಂಡ್ಸ್
ಪ್ರಶಂಸನೀಯ 11 ನೇವಾರ

ಮದರ್ ಇಂಡಿಯ
ವರ್ಣರಂಜಿತ ಹಿಂದಿ ಚಿತ್ರರತ್ನ
ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್
6—1—58 ರಿಂದ
ಚಂದ್ರಬಾಬು, — ಇ. ವಿ ಸರೋಜ
ಪಾರ್ಟು ಮಾಡಿರುವ
ಅಮರಾವತಿ
(ತಮಿಳು)
[ಪ್ರತಿದಿನ 3 ಆಟಗಳು]
ಪ್ರತಿ ಶುಕ್ರವಾರ, ಶನಿವಾರ, ಭಾನುವಾರ
ಬೆಳಗಿನ ಪ್ರದರ್ಶನ 10—30 ಕ್ಕೆ

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚಸೇರಿ 1—80

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ
ಅ ಶೋ ಕಾ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing
L. N. Press
Sivarampet, Mysore

ಅಪೆರಾ— ಜಯಪ್ರದ 3 ನೇ ವಾರ
ಮಾಯಾಬಜಾರ್
ಎನ್. ಟಿ. ರಾಮರಾವ್, ಸಾವಿತ್ರಿ, ರಾಗಿಣಿ, ನಾಗೇಶ್ವರರಾವ್, ಲೇಲಂಗಿ
ಅಭಿನಯಿಸಿರುವ ಮನೋಹರ ಕನ್ನಡ ಚಿತ್ರ
ಪ್ರತಿ ದಿನ 3 ಆಟಗಳು

Sri 'SATYAVADI' Daily
Oldest Newspaper in the State ; Splendid Advertiser
Advertisement Tariff

Casual		Rs 1-50 per inch
Contract above	100 inches	1-00
	500	0-75

Column width 2 inches; length 12½ inches; 4 columns to a page
The decision of the management is final in all matters
Manager "Satyavadi", Chamarajpuram, Mysore

Edited, Printed & Published by Dharma Prachara Nirata M S Krishna Rao at the Satyavadi Press Chamarajpuram Mysore